## ಕರ್ನಾಟಕ ಸರ್ಕಾರ

ಸಂ:ಆಇ 367 ವೆಚ್ಚ-12/2020
(e-Office File)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:26.06.2020

## ಸುತ್ತೋಲೆ

ರಾಜ್ಯದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಅಗತ್ಯವಿರುವ ಸರಕುಗಳ ಖರೀದಿ, ಸೇವೆಗಳ ಪಡೆದುಕೊಳ್ಳುವಿಕೆ ಮತ್ತು ಕಾಮಗಾರಿಗಳ ನಿರ್ವಹಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ, 1999 ಮತ್ತು ನಿಯಮಗಳು 2000 ಅನ್ವಯವೇ ಕೈಗೊಳ್ಳಬೇಕಾಗಿರುತ್ತದೆ. ಒಂದು ವೇಳೆ ಸದರಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ, ಕಾಯಿದೆಯ ಕಲಂ 23 ರನ್ವಯ ದಂಡನೆಗೆ ಒಳಪಡಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಟೆಂಡರ್ ಪ್ರಕ್ರಿಯೆ ಮೂಲಕ ಅಥವಾ ಕೆ.ಟಿ.ಪಿ.ಪಿ ಕಾಯಿದೆ ಕಲಂ 4 ರಲ್ಲಿನ ವಿನಾಯಿತಿಗಳನ್ವಯ ಎಲ್ಲಾ ಸಂಗ್ರಹಣೆಗಳನ್ನು ಕೈಗೊಳ್ಳತಕ್ಕದ್ದು.

ಮೇಲಿನ ಸೂಚನೆಯನ್ನು ರಾಜ್ಯದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಲಾಗಿದ್ದು, ಉಲ್ಲಂಘಿಸುವ ಪ್ರಕರಣಗಳನ್ನು ಕಾಯಿದೆಯನ್ವಯ ಕ್ರಮ ತೆಗೆದುಕೊಳ್ಳಲು ಗಂಭೀರವಾಗಿ ಪರಿಗಣಿಸಲಾಗುತ್ತದೆ.

**(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)**
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಲೋ.ಇ, ಆ.ಕೋ)

**ಇವರಿಗೆ:**
ರಾಜ್ಯದ ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು.